ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳ ನ್ಯಾಯಾಲಯ, ನಾಗಮಂಗಲ.

ಸಿಸಿ ಸಂಖ್ಯೆ.**324/2023**
**PW -1**

ಸಾಕ್ಷಿಗೆ ದಿನಾಂಕಃ **13-11-2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಟಿ ಎನ್ ಸಿ ಆರೋಪಿ ಪರ ವಕೀಲರಿಂದ

1. ನನಗೆ ಆರೋಪಿಯು ಅವರ ಗಂಡ ಸತೀಶರವರಿಂದ ಪರಿಚಯ. ಆರೋಪಿಯ ಗಂಡ ಪ್ಯಾಸೆಂಜರ್ ಆಟೋವನ್ನು ನಾಗಮಂಗಲದಲ್ಲಿ ಓಡಿಸುತ್ತಿದ್ದು ನನಗೆ ಪರಿಚಯ ಆಗಿರುತ್ತಾರೆ. ಆರೋಪಿಯ ಗಂಡ ನನಗೆ 6-7 ವರ್ಷಗಳಿಂದ ಪರಿಚಯ.

2. ಆರೋಪಿಯು ಊರಿನಲ್ಲಿ ಚಿಲ್ಲರೆ ಅಂಗಡಿ ನಡೆಸುತ್ತಾರೆ. ಆರೋಪಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಒಟ್ಟು ಇಬ್ಬರು ಮಕ್ಕಳು ಇರುತ್ತಾರೆ. ಆರೋಪಿಗೆ ಜಮೀನು ಇರುತ್ತದೆ. ಎಷ್ಟು ಇರುತ್ತದೆ ನನಗೆ ಗೊತ್ತಿಲ್ಲ. ಜಮೀನುಗಳು ಆರೋಪಿಯ ಮಾವನ ಹೆಸರಿನಲ್ಲಿ ಇರಬಹುದು. ಜಮೀನಿನ ವ್ಯವಹಾರವನ್ನು ಆರೋಪಿ ಮತ್ತು ಅವರ ಮಾವ ಇಬ್ಬರು ನೋಡಿಕೊಳ್ಳುತ್ತಾರೆ. ಆರೋಪಿಯ ಮಾವನಿಗೆ ಆರೋಪಿಯ ಗಂಡ ಮತ್ತು ಇನ್ನೊಬ್ಬ ಮಗಳು ಇರುತ್ತಾರೆ. ಮಗಳ ಹೆಸರು ನನಗೆ ಗೊತ್ತಿಲ್ಲ. ಚಿಲ್ಲರೆ ಅಂಗಡಿಯಿಂದ ಎಷ್ಟು ಆದಾಯ ಬರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅದೇ ರೀತಿ ಜಮೀನಿನಿಂದ ಅರೋಪಿಗೆ ಎಷ್ಟು ಆದಾಯ ಬರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

3. 2020 ಜೂನ್ ತಿಂಗಳಿನಂದು ಆರೋಪಿಯು ಹಣ ಕೇಳಿರುತ್ತಾರೆ ನಿರ್ಧಿಷ್ಟ ದಿನಾಂಕ ನನಗೆ ನೆನಪಿಲ್ಲ. ಆರೋಪಿಯು ನಮ್ಮ ಮನೆಗೆ ಬಂದು ಸಾಲ ಬೇಕೆಂದು ಕೇಳಿರುತ್ತಾರೆ. ಸಾಲ ಕೇಳುವಾಗ ಮನೆಯಲ್ಲಿ ನಾನೊಬ್ಬನೇ ಇದ್ದೆ ಆರೋಪಿಯು ಸಹಾ ಸಾಲ ಕೇಳಿಕೊಂಡು ಒಬ್ಬರೆ ಬಂದಿದ್ದರು. ಆರೋಪಿಯು ಸಾಲ ತೀರಿಸುವ ಸಲುವಾಗಿ ನನ್ನ ಬಳಿ ಸಾಲವನ್ನು ಕೇಳಿದ್ದರು. ಸದರಿ ಸಾಲವನ್ನು ನನ್ನ ಗಂಡನ ಇನ್ಸುರೆನ್ಸ ಹಣದಿಂದ ಕೊಡುವುದಾಗಿ ಆರೋಪಿಯು ಮುಂದುವರೆದು ನುಡಿಯುತ್ತಾರೆ. ಯಾರ ಬಳಿ ಎಷ್ಟು ಸಾಲವನ್ನು ಆರೋಪಿ ಮಾಡಿದ್ದಾರೆ ಎಂದು ನಾನು ಆರೋಪಿಯನ್ನು ಕೇಳಿ ತಿಳಿದುಕೊಂಡಿರುವುದಿಲ್ಲ.

4. ದಿನಾಂಕ 20-6-2020 ರಂದು ನಾನು ಆರೋಪಿಗೆ ಹಣ ಕೊಟ್ಟಿರುತ್ತೇನೆ ಸಾಕ್ಷಿಯು ನಂತರದಲ್ಲಿ ದಿನಾಂಕ 25-6-2020 ಎಂದು ದಿನಾಂಕ ವನ್ನು ನುಡಿದಿರುತ್ತಾರೆ. ನಾನು ಆರೋಪಿಗೆ ಹಣವನ್ನು ನಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ. ಆರೋಪಿಯು ಸಾಲವನ್ನು ಪಡೆಯುವಾಗ ಒಬ್ಬರೇ ಬಂದಿದ್ದರು. ನಾನು ಆಗ ಮನೆಯಲ್ಲಿ ಒಬ್ಬನೇ ಇದ್ದೆ. ಸಾಲಕ್ಕೆ ಬಡ್ಡಿ ಕೊಡುವುದರ ಬಗ್ಗೆ ಮಾತುಕತೆ ಆಗಿರುವುದಿಲ್ಲ. ಒಂದು ವರ್ಷದ ಅವಧಿಯೊಳಗೆ ಸಾಲವನ್ನು ಮರುಪಾವತಿ ಮಾಡುವುದಾಗಿ ಮಾತುಕತೆ ಆಗಿತ್ತು ಎಂದು ಮುಂದುರೆದು ನುಡಿಯುತ್ತಾರೆ. ಹಣ ಪಡೆಯುವಾಗ ಆರೋಪಿಯು ಚೆಕ್ಕನ್ನು ಕೊಟ್ಟಿದ್ದರು. ಚೆಕ್ಕನ್ನು ಹೊರತು ಪಡಿಸಿ ಬೇರೆ ದಾಖಲೆಯನ್ನು ಆರೋಪಿಯಿಂದ ನಾನು ಪಡೆದುಕೊಂಡಿರುವುದಿಲ್ಲ.

5. 2020 ಜೂನ್ ತಿಂಗಳಿನಲ್ಲಿ ದೇಶದ್ಯಾಂತ ಕರೋನ ಆಗಿ ಲಾಕಡೌನ್ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಜನರು ಯಾರು ಸಹಾ ಹೊರಗಡೆ ಬಂದು ಓಡಾಡುತ್ತಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಜನರಿಗೆ ಜೀವ

ಇದ್ದುದರಿಂದ ವ್ಯವಹಾರ ಮಾಡಲು ಹಿಂಜರಿಯುತ್ತಿದ್ದರು ಎಂದರೆ ಸರಿಯಲ್ಲ.

6. 3,50,000/- ರೂಪಾಯಿ ನನಗೆ ದೊಡ್ಡ ಮೊತ್ತ ಎಂದರೆ ಸರಿ. ಆರೋಪಿಯು ನನಗೆ ಕಷ್ಟ ಎಂದು ಹೇಳಿಕೊಂಡಿದ್ದರಿಂದ ಮತ್ತು ಆರೋಪಿಯ ಗಂಡ ನನಗೆ ಸ್ನೇಹಿತನಾಗಿದ್ದರಿಂದ ಬಡ್ಡಿ ಇಲ್ಲದೇ ಮತ್ತು ಯಾವುದೇ ಆಧಾರ ಇಲ್ಲದೇ ಆರೋಪಿಗೆ ಸಾಲ ಕೊಟ್ಟಿರುತ್ತೇನೆ. ನಾನು ಆರೋಪಿಯ ಮನೆಗೆ ಹೋಗಿ ಬಂದಿರುತ್ತೇನೆ. ಆರೋಪಿಯವರ ಮಗಳ ಮದುವೆಗೂ ಸಹಾ ನಾನು ಹೋಗಿದ್ದೆ ಎಂದು ನುಡಿಯುತ್ತಾರೆ.

7. ಚೆಕ್ಕನ್ನು ಮುಂಚೆಯೇ ಬರೆದಿದ್ದು ನನ್ನ ಮುಂದೆಯೇ ಆರೋಪಿಯು ಸಹಿ ಮಾಡಿ ಕೊಟ್ಟಿರುತ್ತಾರೆ. ಆರೋಪಿಯ ವಿದ್ಯಾಭ್ಯಾಸದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ಚೆಕ್ಕಗೆ ಸಹಿ ಮಾಡುವಾಗ ಅವರ ಸಹಿಯನ್ನು ನಾನು ನೋಡಿರುತ್ತೇನೆ. ಚೆಕ್ಕನ ವಿವರಣೆಯನ್ನು ಯಾರು ಭರ್ತಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಪ್ರಭುಸ್ವಾಮಿ ವಕೀಲರ ಬಳಿ ನನ್ನ ಚೆಕ ಪ್ರಕರಣಗಳನ್ನು ನಡೆಸುತ್ತೇನೆ ಎಂದರೆ ಸರಿ. ಸದರಿ ಚಕ್ಕಿನಲ್ಲಿ ಇರುವ ವಿವರಣೆಯು ಶ್ರೀ ಪ್ರಭುಸ್ವಾಮಿ ವಕೀಲರ ಕೈ ಬರವಣಿಗೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಶ್ರೀ ಪ್ರಭುಸ್ವಾಮಿ ವಕೀಲರ ಕೈ ಬರವಣಿಗೆಯನ್ನು ನೋಡಿರುವುದಿಲ್ಲ.

8. ದಿನಾಂಕ 21-09-2021 ರಂದು ಆರೋಪಿ ನೀಡಿದ ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ವಿಜಯ ಬ್ಯಾಂಕ್ ಬ್ಯಾಂಕ ಆಫ್ ಬರೋಡಾದೊಂದಿಗೆ 2019 ರಲ್ಲಿ ವಿಲೀನಗೊಂಡಿರುವ ಬಗ್ಗೆ ನಾನು

ತಿಳಿದುಕೊಂಡಿರುತ್ತೇನೆ. ವಿಜಯ ಬ್ಯಾಂಕ ಚೆಕ್ಕುಗಳಿಗೆ ನಾನು ಚೆಕ್ಕನ್ನು ಹಾಜರು ಪಡಿಸುವಾಗ ಬ್ಯಾಂಕಿನವರು ಸ್ವೀಕರಿಸಲು ಅವದಿ ಇನ್ನು ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ವಿಜಯ ಬ್ಯಾಂಕ ಚೆಕ್ಕುಗಳನ್ನು ಬ್ಯಾಂಕ ಆಫ ಬರೋಡ ಬ್ಯಾಂಕಿಗೆ ಹಾಜರಪಡಿಸಲು ಯಾವಾಗ ಕೊನೆಯ ದಿನಾಂಕವಾಗಿತ್ತು ಎಂದು ನನಗೆ ಗೊತ್ತಿಲ್ಲ. ದಿನಾಂಕ 01-07-2021 ರಂದು ವಿಜಯ ಬ್ಯಾಂಕ ಚೆಕ್ಕುಗಳನ್ನು ಸ್ಥಗಿತಗೊಳಿಸಲಾಗಿತ್ತು ಎಂದರೆ ಸಾಕ್ಷಿಯ ಅದರೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 01-07-2021 ರಲ್ಲಿ ವಿಜಯ ಬ್ಯಾಂಕ ಚೆಕ್ಕುಗಳ ಮಾನ್ಯತೆಯು ಸ್ಥಗಿತಗೊಂಡಿದ್ದರಿಂದ ನಾನು ಚೆಕ್ಕನ್ನು ಹಾಜರು ಪಡಿಸಿದ್ದೆ ಎಂದು ಹೇಳುವ ದಿನಾಂಕದಂದು ವಿಜಯ ಬ್ಯಾಂಕ ಚೆಕ್ಕುಗಳನ್ನು ಬ್ಯಾಂಕಿನಲ್ಲಿ ಪರಿಗಣಿಸಲು ಸಾದ್ಯವೇ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬ್ಯಾಂಕ ವ್ಯವಸ್ಥಾಪರ ಜೊತೆ ಶರೀಕಾಗಿ ನಿಪಿ 2 ಹಿಂಬರಹವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

9. 2019 ರಲ್ಲಿ ಆರೋಪಿಯ ಗಂಡ ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು 2018 ರಲ್ಲಿ ಮರಣ ಹೊಂದಿರಬಹುದು ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.